| | | | |
|---|---|---|---|
| | | ಅಂಗನವಾಡಿ ಕೇಂದ್ರಗಳ ನಿರ್ಮಾಣಕ್ಕೆ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನದಲ್ಲಿ ಹೊಂದಾಣಿಕೆ ಮೊತ್ತವನ್ನು ಭರಿಸಬಹುದಾಗಿದ್ದು, ಈ ಬಗ್ಗೆ ತಾಲ್ಲೂಕು ಪಂಚಾಯಿತಿಗಳಲ್ಲಿ ಕ್ರಮ ವಹಿಸಬೇಕಾಗಿರುತ್ತದೆ ಎಂದು ಮುಖ್ಯ ಯೋಜನಾಧಿಕಾರಿಯವರು ಅಭಿಪ್ರಾಯಪಟ್ಟರು. | ಅನುದಾನದಲ್ಲಿ ಭರಿಸುವಂತೆ ತಾಲ್ಲೂಕು ಪಂಚಾಯಿತಿಗಳಿಗೆ ತಿಳಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| | | ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು. | |

Sulochana

(ಸುಲೋಚನಾ ರಾಮಕೃಷ್ಣ),
ಅಧ್ಯಕ್ಷರು,
ಸಾಮಾನ್ಯ ಸ್ಥಾಯಿ ಸಮಿತಿ,
ಜಿಲ್ಲಾ ಪಂಚಾಯಿತಿ, ಹಾಸನ.

| | | | |
|---|---|---|---|
| | | ಪಡೆಯಲಾಗಿದ್ದು, ಕಟ್ಟಡದ ಮಾಲೀಕರು ಜಿಲ್ಲಾ ಪಂಚಾಯತ್ ನಿಂದ ನಿಗದಿಪಡಿಸುವ ಬಾಡಿಗೆಯನ್ನು ಪಡೆಯಲು ಒಪ್ಪಿ ಕರಾರು ಪತ್ರವನ್ನು ಸಲ್ಲಿಸಿರುತ್ತಾರೆ. ಸದರಿ ಕಟ್ಟಡವು ಉತ್ತಮ ನೀರಿನ ಸೌಲಭ್ಯ, ವಿದ್ಯುತ್ ಸೌಲಭ್ಯ ಹಾಗೂ ಗಾಳಿ ಬೆಳಕಿನ ಸೌಲಭ್ಯವನ್ನು ಹೊಂದಿದ್ದು, 5 ಕೊಠಡಿಗಳನ್ನು ಹೊಂದಿದ್ದು, ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡಿರುತ್ತದೆ. ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಹಾಸನ ವಿಭಾಗ, ಹಾಸನ ರವರು ಸದರಿ ಕಟ್ಟಡಕ್ಕೆ ಮಾಹೆಯಾನ ರೂ.9400/-ರಂತೆ ನಮೂನೆ-10ರಲ್ಲಿ ಶಿಫಾರಸ್ಸು ಮಾಡಿರುತ್ತಾರೆ. ಆದ್ದರಿಂದ, ಸದರಿ ಕಟ್ಟಡಕ್ಕೆ ಬಾಡಿಗೆಯನ್ನು ಪಾವತಿಸುವ ಬಗ್ಗೆ ಸಭೆಯು ಅನುಮೋದನೆ ನೀಡಬೇಕೆಂದು ಕೋರಿದರು. | ಮಾಹೆಯಾನ ರೂ.7000/-(ರೂಪಾಯಿ ಏಳು ಸಾವಿರ ಮಾತ್ರ)ಗಳಂತೆ ದಿ: 01-07-2011ರಿಂದ ಪಾವತಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| **8. ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು** | | | |
| 1 | ಆರ್.ಐ.ಡಿ.ಎಫ್ ಅಂಗನವಾಡಿ ಕಟ್ಟಡಗಳ ನಿರ್ಮಾಣದ ಬಗ್ಗೆ. | ಮಾನ್ಯ ಸದಸ್ಯರಾದ ಶ್ರೀ ದೇವೇಗೌಡ ಉರುಫ್ ಪಾಪಣ್ಣಿ ರವರು ಮಾತನಾಡುತ್ತಾ, ಆರ್.ಐ.ಡಿ.ಎಫ್ ಅಂಗನವಾಡಿ ಕಟ್ಟಡಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯಗಳ ನಿಗಮ ನಿಯಮಿತ ಇವರಿಗೆ ಅನುದಾನವನ್ನು ಬಿಡುಗಡೆ ಮಾಡಿದ್ದರೂ ಸಹ ಇಲ್ಲಿಯವರೆಗೆ ಕಟ್ಟಡಗಳ ನಿರ್ಮಾಣ ಮಾಡಿರುವುದಿಲ್ಲ. ಆದ್ದರಿಂದ, ಸದರಿ ಅಂಗನವಾಡಿ ಕಟ್ಟಡಗಳನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳ ವತಿಯಿಂದ ಅನುಷ್ಠಾನಗೊಳಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟರು.<br>ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಸನ ಇವರು ಮಾತನಾಡುತ್ತಾ, ಆರ್.ಐ.ಡಿ.ಎಫ್ ಅಂಗನವಾಡಿ ಕಟ್ಟಡಗಳಿಗೆ ಘಟಕ ವೆಚ್ಚ ರೂ.3.62ಲಕ್ಷಗಳಂತೆ ನಬಾರ್ಡ್ ವತಿಯಿಂದ ನಿಗಧಿಪಡಿಸಿರುತ್ತಾರೆ. ಆದರೆ, ರೂ.3.62ಲಕ್ಷಗಳಲ್ಲಿ ಅಂಗನವಾಡಿ ಕಟ್ಟಡವನ್ನು ನಿರ್ಮಾಣ ಮಾಡಲು ಸಾಧ್ಯವಾಗುವುದಿಲ್ಲವೆಂದು ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯಗಳ ನಿಗಮರವರು ತಿಳಿಸಿರುತ್ತಾರೆ. ಆದ್ದರಿಂದ, ರೂ.3.62ಲಕ್ಷಗಳ ಜೊತೆಗೆ ಹೊಂದಾಣಿಕೆ ಮೊತ್ತವಾಗಿ ಪ್ರತಿ ಅಂಗನವಾಡಿ ಕಟ್ಟಡಕ್ಕೆ ರೂ.38000/-ದಂತೆ ನೀಡಿದಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳ ವತಿಯಿಂದ ಅಂಗನವಾಡಿ ಕಟ್ಟಡಗಳನ್ನು ಅನುಷ್ಠಾನ ಮಾಡಬಹುದಾಗಿರುತ್ತದೆ ಎಂದು ಅಭಿಪ್ರಾಯಪಟ್ಟರು.<br>2012-13ನೇ ಸಾಲಿಗೆ ತಾಲ್ಲೂಕು ಪಂಚಾಯಿತಿಗಳಿಗೆ 13ನೇ ಹಣಕಾಸು ಇತರ ಯೋಜನೆಯಡಿ ಬಿಡುಗಡೆಯಾಗುವ ಅನುದಾನ ಮತ್ತು ಜಿಲ್ಲೆಯ ಐದು ತಾಲ್ಲೂಕುಗಳಿಗೆ ವಿಶೇಷ ಅಭಿವೃದ್ಧಿ ಯೋಜನೆಯಡಿ | ಸಭೆಯಲ್ಲಿ ವಿಷಯದ ಬಗ್ಗೆ ವಿವರಾಗಿ ಚರ್ಚಿಸಲಾಯಿತು.<br>ಆರ್.ಐ.ಡಿ.ಎಫ್ ಅಂಗನವಾಡಿ ಕಟ್ಟಡಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ, ನಬಾರ್ಡ್ ವತಿಯಿಂದ ನಿಗದಿಪಡಿಸಿರುವ ರೂ.3.62 ಲಕ್ಷಗಳಲ್ಲಿ ಕಟ್ಟಡವನ್ನು ನಿರ್ಮಿಸಲು ಸಾಧ್ಯವಾಗದೇ ಇರುವುದರಿಂದ, ಪ್ರತಿ ಕಟ್ಟಡವನ್ನು ರೂ.4.00ಲಕ್ಷಗಳ ಅಂದಾಜು ಮೊತ್ತದಲ್ಲಿ ನಿರ್ಮಿಸಲು ಅವಶ್ಯವಿರುವ ರೂ.38000/-ಗಳನ್ನು 2012-13ನೇ ಸಾಲಿನಲ್ಲಿ ಸಕಲೇಶಪುರ, ಹಾಸನ ಮತ್ತು ಆಲೂರು ತಾಲ್ಲೂಕು ಪಂಚಾಯಿತಿಗಳಿಗೆ ಬಿಡುಗಡೆಯಾಗುವ 13ನೇ ಹಣಕಾಸು ಯೋಜನೆಯಡಿ ಮತ್ತು ಅರಸೀಕೆರೆ, ಅರಕಲಗೂಡು, ಹೊಳೆನರಸೀಪುರ, ಬೇಲೂರು, ಚನ್ನರಾಯಪಟ್ಟಣ ತಾಲ್ಲೂಕುಗಳಿಗೆ ಬಿಡುಗಡೆಯಾಗುವ ವಿಶೇಷ ಅಭಿವೃದ್ಧಿ ಯೋಜನೆಯ |

| | | | |
|---|---|---|---|
| | | | ಯಾವುದೇ ಅನುದಾನ ಲಭ್ಯವಿರುವುದಿಲ್ಲ. ಆದ್ದರಿಂದ, ಸದರಿ ಕಾಮಗಾರಿಗಳಿಗೆ ವಿಶೇಷ ಅನುದಾನವನ್ನು ಸರ್ಕಾರದಿಂದ ನೇರವಾಗಿ ಬಿಡುಗಡೆ ಮಾಡಬೇಕೆಂದು ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| 6 | 2012-13ನೇ ಸಾಲಿನ ಆರ್ಥಿಕ ವರ್ಷದಲ್ಲಿ ಲೆಕ್ಕಶೀರ್ಷಿಕೆ 4702ರ ವಿಶೇಷ ಅಭಿವೃದ್ಧಿ ಯೋಜನೆಯಡಿ ಸಣ್ಣ ನೀರಾವರಿ ಕೆರೆಗಳ ಕ್ರಿಯಾ ಯೋಜನೆ ಸಿದ್ಧಪಡಿಸುವ ಬಗ್ಗೆ. | ಮುಖ್ಯ ಯೋಜನಾಧಿಕಾರಿಯವರು ಮಾತನಾಡುತ್ತಾ, ಪಂಚಾಯತ್ ರಾಜ್ ವ್ಯವಸ್ಥೆಗೆ ಒಳಪಟ್ಟು 40 ಹೆಕ್ಟೇರ್ ಗಿಂತ ಕಡಿಮೆ ಆಯಕಟ್ಟು ಇರುವ ಕೆರೆಗಳಲ್ಲಿ ಅಂತರ್ಜಲ ಮಟ್ಟ ಕುಸಿದಿದ್ದು, ಜನವಸತಿ ಪ್ರದೇಶಗಳಲ್ಲಿ ಕುಡಿಯುವ ನೀರಿನಲ್ಲಿ ಫ್ಲೋರೈಡ್, ನೈಟ್ರೇಟ್, ಕಬ್ಬಿಣ ಮತ್ತು ಇತರೆ ಹಾನಿಕಾರಕ ರಾಸಾಯನಿಕಗಳಿಂದ ಕಲುಷಿತತೆ ಹೆಚ್ಚಾಗಿದ್ದು, ಅಂತಹ ಕೆರೆಗಳಲ್ಲಿ ಅಂತರ್ಜಲ ಮರುಪೂರಣದಿಂದ ಸಮಸ್ಯೆ ಕಡಿಮೆ ಮಾಡುವ ನಿಟ್ಟಿನಲ್ಲಿ ಹಾಸನ ಜಿಲ್ಲೆಯ 5 ತಾಲ್ಲೂಕುಗಳಿಗೆ ವಿಶೇಷ ಅಭಿವೃದ್ಧಿ ಯೋಜನೆ/ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ ಒಟ್ಟು ರೂ.97.25ಲಕ್ಷಗಳ ಅನುದಾನ ಮಂಜೂರಾಗಿದ್ದು, ಸದರಿ ಅನುದಾನದಲ್ಲಿ ಅಂತರ್ಜಲ ಅಭಿವೃದ್ಧಿಗೆ ಸಂಬಂಧಿಸಿದಂತೆ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿದ್ದು, ಕ್ರಿಯಾ ಯೋಜನೆ ಸಿದ್ಧಪಡಿಸಲು ಅನುಮೋದನೆ ನೀಡಬೇಕೆಂದು ಕೋರಿದರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>2012-13ನೇ ಸಾಲಿಗೆ 4702 ವಿಶೇಷ ಅಭಿವೃದ್ಧಿ ಯೋಜನೆಯಡಿ ಸಣ್ಣ ನೀರಾವರಿ ಕೆರೆಗಳ ಪುನರ್ ಸ್ಥಿತಿ ಮತ್ತು ಪುನಃಶ್ಚೇತನಕ್ಕಾಗಿ ನಿಗದಿಪಡಿಸಿರುವ ರೂ.97.25ಲಕ್ಷಗಳಲ್ಲಿ ಜಿಲ್ಲೆಯ 5 ತಾಲ್ಲೂಕುಗಳು ಅಂದರೆ, ಅರಸೀಕೆರೆ, ಅರಕಲಗೂಡು, ಬೇಲೂರು, ಚನ್ನರಾಯಪಟ್ಟಣ ಮತ್ತು ಹೊಳೆನರಸೀಪುರ ಇವುಗಳಿಗೆ ಸರ್ಕಾರದಿಂದ ನಿಗದಿಪಡಿಸಿರುವ ಅನುದಾನಕ್ಕೆ ಹೊಸ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| 7 | ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳ ಕಛೇರಿ, ಚನ್ನರಾಯಪಟ್ಟಣ ಇಲ್ಲಿನ ಕಟ್ಟಡಕ್ಕೆ ಬಾಡಿಗೆ ನಿಗದಿಪಡಿಸುವ ಕುರಿತು. | ಟಿಪ್ಪಣಿ ಸಂಖ್ಯೆ: ಜಿಸಕಅ/ಡಿ-5/ಸಿಆರ್ 4/2012-13 ದಿನಾಂಕ: 04-07-2012ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಯವರು ಮಾತನಾಡುತ್ತಾ, ಚನ್ನರಾಯಪಟ್ಟಣ ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳ ಕಛೇರಿಯು ಈ ಹಿಂದೆ ಕೃಷ್ಣೇಗೌಡರ ಅಸ್ತಿತ್ವಕ್ಕೆ ಸೇರಿದ ಕಟ್ಟಡದಲ್ಲಿ ಬಾಡಿಗೆ ಆಧಾರದ ಮೇಲೆ ನಡೆಯುತ್ತಿದ್ದು, ಕಛೇರಿ ಪಕ್ಕದಲ್ಲೇ ಮಾಲೀಕರ ಶಾಲೆ ನಡೆಯುತ್ತಿದ್ದು, ಶಾಲಾ ಮಕ್ಕಳ ಗಲಾಟೆಯಿಂದ ಕಛೇರಿ ಕೆಲಸಕ್ಕೆ ತೊಂದರೆಯಾದ ಕಾರಣ ಆ ಕಟ್ಟಡವನ್ನು ಬಿಟ್ಟು ಅಲ್ಲೇ ಪಕ್ಕದಲ್ಲೇ ಇರುವ ಆದರ್ಶ ನಗರದ ಆರ್.ಪ್ರಭಾಕರ ಬಿನ್ ಡಿ.ಎ.ರುದ್ರಾಚಾರ್ ಇವರಿಗೆ ಸೇರಿದ ಕಟ್ಟಡದಲ್ಲಿ ಕಛೇರಿಯನ್ನು ದಿನಾಂಕ: 01-07-2011ರಿಂದ ಕಟ್ಟಡವನ್ನು ಬಾಡಿಗೆಗೆ | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಆರ್.ಪ್ರಭಾಕರ ಬಿನ್ ಡಿ.ಎ.ರುದ್ರಾಚಾರ್, ಆದರ್ಶನಗರ, ಚನ್ನರಾಯಪಟ್ಟಣ ಇವರ ಒಡೆತನದ ಕಟ್ಟಡದಲ್ಲಿ ನಡೆಯುತ್ತಿರುವ ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳ ಕಛೇರಿ ಕಟ್ಟಡಕ್ಕೆ |

| | | | |
|---|---|---|---|
| | | ಅಳವಡಿಸುವುದು. ರೂ.0.50ಲಕ್ಷಗಳ ಕಾಮಗಾರಿಗಳಿಗೆ ಅನುಮೋದನೆಯನ್ನು ನೀಡಲು ಒಪ್ಪಿಗೆಯನ್ನು ನೀಡಿದರು. | ಯೋಜನೆಯನ್ನು ಸಿದ್ಧಪಡಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| 4 | 2012-13ನೇ ಸಾಲಿಗೆ ನಿಗಧಿಯಾದ 2702 ಕೆರೆ ಅಭಿವೃದ್ಧಿ ಯೋಜನೆಯ ಅನುದಾನಕ್ಕೆ ಕ್ರಿಯಾ ಯೋಜನೆ ತಯಾರಿಸುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಯೋವಿ (1)2702/ಕೆರೆಅ/ಕ್ರಿಯೋ/2/2012-13 ದಿನಾಂಕ: 30-06-2012ನ್ನು ಸಭೆಯಲ್ಲಿ ಮಂಡಿಸಲಾಯಿತು.<br>2012-13ನೇ ಸಾಲಿಗೆ ಲಿಂಕ್ ಪುಸ್ತಕದಲ್ಲಿ 2702-00-101-0-26 ಕೆರೆಗಳ ವಾರ್ಷಿಕ ನಿರ್ವಹಣೆ ಮತ್ತು ದುರಸ್ಥಿ ಲೆಕ್ಕ ಶೀರ್ಷಿಕೆಯಡಿ ರೂ.183.55 ಲಕ್ಷ ನಿಗದಿಯಾಗಿದ್ದು, ಸದರಿ ಲೆಕ್ಕಶೀರ್ಷಿಕೆ ಯೋಜನೆಗೆ ಸರ್ಕಾರದ ಮಾರ್ಗಸೂಚಿಗಳಂತೆ ಕ್ರಿಯಾ ಯೋಜನೆ ತಯಾರಿಸಬೇಕಾಗಿರುತ್ತದೆ. ಅದರಂತೆ, 2012-13ನೇ ಸಾಲಿಗಾಗಿ ಸರ್ಕಾರದಿಂದ ಲಿಂಕ್ ಪುಸ್ತಕದಲ್ಲಿ ನಿಗದಿಯಾದ ಕೆರೆ ಅಭಿವೃದ್ಧಿ ಯೋಜನೆಯ 2702 ಲೆಕ್ಕಶೀರ್ಷಿಕೆಯ ರೂ.183.55 ಲಕ್ಷಗಳ ಅನುದಾನಕ್ಕೆ ಮಾರ್ಗಸೂಚಿಗಳಂತೆ ಅವಶ್ಯಕ ಕೆರೆ ಅಭಿವೃದ್ಧಿ ಮತ್ತು ದುರಸ್ಥಿ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಕ್ರಿಯಾ ಯೋಜನೆ ತಯಾರಿಸುವ ಬಗ್ಗೆ (ಮುಂದುವರೆದ ಮತ್ತು ಹೊಸ ಕಾಮಗಾರಿಗಳು) ಅನುಮೋದನೆ ನೀಡುವಂತೆ ಮುಖ್ಯ ಯೋಜನಾಧಿಕಾರಿಯವರು ಸಭೆಗೆ ಪ್ರಸ್ತಾವನೆಯನ್ನು ಮಂಡಿಸಿದರು ಮತ್ತು ಮುಂದುವರೆದ ಕಾಮಗಾರಿಗಳಿಗಾಗಿ ಎರಡೂ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳಿಗೆ ಸಂಬಂಧಿಸಿದಂತೆ ರೂ.50.00ಲಕ್ಷಗಳ ಅನುದಾನದ ಅಗತ್ಯವಿದ್ದು, ಹೊಸ ಕಾಮಗಾರಿಗಳಿಗೆ ರೂ.133.55ಲಕ್ಷಗಳ ಅನುದಾನ ಲಭ್ಯವಿರುವುದಾಗಿ ಸಭೆಗೆ ವಿವರ ನೀಡಿದರು.<br>ಮಾನ್ಯ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರು 2012-13ನೇ ಸಾಲಿನಲ್ಲಿ 2702 ಕೆರೆ ಅಭಿವೃದ್ಧಿ ಯೋಜನೆಯಡಿ ಮುಂದುವರೆದ ಕಾಮಗಾರಿಗಳಿಗೆ ರೂ.50.00ಲಕ್ಷಗಳನ್ನು ತೆಗೆದಿರಿಸಿ ಉಳಿದ ರೂ.133.55ಲಕ್ಷಗಳಿಗೆ ಹೆಚ್ಚುವರಿಯಾಗಿ ರೂ.16.45ಲಕ್ಷಗಳನ್ನು ಸೇರಿಸಿ ಒಟ್ಟು ರೂ.150.00ಲಕ್ಷಗಳಲ್ಲಿ ಹೊಸ ಕಾಮಗಾರಿಗಳನ್ನು ಸಿದ್ಧಪಡಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>2012-13ನೇ ಸಾಲಿನ ಲಿಂಕ್ ಪುಸ್ತಕದಲ್ಲಿ ಯೋಜನೇತರ 2702-00-101-0-26 ಕೆರೆಗಳ ವಾರ್ಷಿಕ ನಿರ್ವಹಣೆ ಮತ್ತು ದುರಸ್ಥಿ ಲೆಕ್ಕ ಶೀರ್ಷಿಕೆಯಡಿ ನಿಗಧಿಯಾಗಿರುವ ರೂ.183.55 ಲಕ್ಷಗಳಲ್ಲಿ ಮುಂದುವರೆದ ಕಾಮಗಾರಿಗಳಿಗೆ ರೂ.50.00 ಲಕ್ಷಗಳನ್ನು ತೆಗೆದಿರಿಸಿ ಉಳಿದ ರೂ.133.55 ಲಕ್ಷಗಳಿಗೆ ಹೆಚ್ಚುವರಿಯಾಗಿ ರೂ.16.45ಲಕ್ಷ ಗಳನ್ನು ಸೇರಿಸಿ ಒಟ್ಟು ರೂ.150.00 ಲಕ್ಷಗಳಲ್ಲಿ ಹೊಸ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| 5 | ಹಾಸನ ಜಿಲ್ಲೆಯ ರಸ್ತೆ, ಚರಂಡಿ ಹಾಗೂ ಸೇತುವೆ ಕಾಮಗಾರಿಗಳ ಪತ್ರಗಳನ್ನು ಮಂಡಿಸುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಯೋವಿ(5)ರಸ್ತೆ ಕಾಮಗಾರಿಗಳು/6/2012-13 ದಿನಾಂಕ: 02-07-2012ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಮುಖ್ಯ ಯೋಜನಾಧಿಕಾರಿಯವರು ಮಾತನಾಡುತ್ತಾ, ಹಾಸನ ಜಿಲ್ಲೆಯ ಗ್ರಾಮಗಳ ರಸ್ತೆ ಚರಂಡಿ ಹಾಗೂ ಸೇತುವೆ ಕಾಮಗಾರಿಗಳನ್ನು ಕೈಗೊಳ್ಳುವಂತೆ ಹಾಗು ಅನುದಾನ ಒದಗಿಸಿ ಕೊಡುವಂತೆ ಕೋರಿ ಸರ್ಕಾರದಿಂದ ಮತ್ತು ಸಾರ್ವಜನಿಕರಿಂದ ಹಾಗೂ ಜಿಲ್ಲಾ ಪಂಚಾಯಿತಿ ಸದಸ್ಯರಿಂದ ಪತ್ರಗಳು ಬಂದಿದ್ದು, ಸದರಿ ರಸ್ತೆ ಚರಂಡಿ ಹಾಗೂ ಸೇತುವೆ ಕಾಮಗಾರಿಗಳನ್ನು 2012-13ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ವತಿಯಿಂದ ಕೈಗೆತ್ತಿಕೊಂಡು ಅನುಷ್ಠಾನ ಪಡಿಸುವ ಕುರಿತು ಮತ್ತು ಕಾಮಗಾರಿಗಳಿಗೆ ಅನುದಾನ ಒದಗಿಸುವ ಬಗ್ಗೆ ಸಭೆಗೆ ವಿಷಯವನ್ನು ಮಂಡಿಸಿದರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಸಾರ್ವಜನಿಕರಿಂದ ಮತ್ತು ಜಿಲ್ಲಾ ಪಂಚಾಯಿತಿ ಸದಸ್ಯರಿಂದ ಬಂದಿರುವ ಪತ್ರಗಳಲ್ಲಿ ಕೋರಿರುವಂತೆ ಹಾಸನ ಜಿಲ್ಲೆಯ ಗ್ರಾಮಗಳ ರಸ್ತೆ, ಚರಂಡಿ ಮತ್ತು ಸೇತುವೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಜಿಲ್ಲಾ ಪಂಚಾಯಿತಿಯಲ್ಲಿ |

| | | | |
|---|---|---|---|
| | | | ರೂ.200.00ಲಕ್ಷಗಳಲ್ಲಿ ಮುಂದುವರೆದ ಕಾಮಗಾರಿಗಳಿಗೆ ಅವಶ್ಯ ಅನುದಾನವನ್ನು ತೆಗೆದಿರಿಸಿ ಉಳಿದ ಅನುದಾನಕ್ಕೆ ಹೊಸ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| 3 | 2012-13ನೇ ಸಾಲಿನಲ್ಲಿ ನಿಗಧಿಯಾದ 2515 ಜಿಲ್ಲಾ ಪಂಚಾಯಿತಿ ಕಟ್ಟಡ ಯೋಜನೆಯ ಅನುದಾನಕ್ಕೆ ಕ್ರಿಯಾ ಯೋಜನೆ ತಯಾರಿಸುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಯೋ.ವಿ(10)2515 ಜಿ.ಪಂ.ಕ/1/2012-13 ದಿನಾಂಕ: 02-07-2012ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಮುಖ್ಯ ಯೋಜನಾಧಿಕಾರಿಯವರು ಮಾತನಾಡುತ್ತಾ, 2012-13ನೇ ಸಾಲಿನಲ್ಲಿ ಜಿಲ್ಲಾ ಪಂಚಾಯಿತಿ ಕಟ್ಟಡ ಯೋಜನೆಯ 2515-00-101-0-29 ಅನುದಾನ ರೂ.50.00ಲಕ್ಷಗಳಿಗೆ ಕ್ರಿಯಾ ಯೋಜನೆಯನ್ನು ರೂಪಿಸಿ ಅನುಷ್ಠಾನಪಡಿಸಬೇಕಾಗಿದ್ದು, ಇದರಲ್ಲಿ ಈಗಾಗಲೇ ಅನುಷ್ಠಾನ ಮಾಡಲಾಗಿರುವ ಕೆಳಕಂಡ ಕಾಮಗಾರಿಗಳ ಬಾಬ್ತನ್ನು ಪಾವತಿಸಬೇಕಾಗಿದೆ ಎಂದು ತಿಳಿಸಿದರು.<br>ವಿವರಗಳು ಕೆಳಕಂಡಂತಿವೆ.<br>1. ಹಾಸನ ಜಿಲ್ಲಾ ಪಂಚಾಯತ್ ಹೇಮಾವತಿ ಸಭಾಂಗಣದ ನವೀಕರಣ ಕಾಮಗಾರಿಯ ಉಳಿಕೆ ಬಾಬ್ತು ರೂ.14.67 ಲಕ್ಷ (ಅಂದಾಜು ಮೊತ್ತ ರೂ.38.00ಲಕ್ಷ ಪಾವತಿ ರೂ.23.33ಲಕ್ಷಗಳು)<br>2. ಹಾಸನ ಜಿಲ್ಲಾ ಪಂಚಾಯತ್ ಕಛೇರಿ ಕಟ್ಟಡಕ್ಕೆ ಕಾವಲುಗಾರನ ಕೊಠಡಿ, ಗ್ರಾನೈಟ್ ಕುರ್ಚಿ ಅಳವಡಿಸುವುದು ಮತ್ತು ತಂತಿ ಬೇಲಿ ರೂ.2.85ಲಕ್ಷಗಳು<br>3. ಹಾಸನ ಜಿಲ್ಲಾ ಪಂಚಾಯತ್ ಕಛೇರಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕೊಠಡಿಗೆ ಬಣ್ಣ ಬಳಿಯುವುದು ಮತ್ತು ಕಿಟಕಿಗಳಿಗೆ ವರ್ಟಿಕಲ್ ಬ್ಲೈಂಡ್ ಅಳವಡಿಸುವುದು. ರೂ.0.50ಲಕ್ಷಗಳು.<br>ಮಾನ್ಯ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರುಗಳು ಹೇಮಾವತಿ ಸಭಾಂಗಣದ ನವೀಕರಣದ ಕಾಮಗಾರಿಯ ಬಗ್ಗೆ ಆಕ್ಷೇಪವನ್ನು ವ್ಯಕ್ತಪಡಿಸುತ್ತಾ, ಅನುಮೋದನೆಯನ್ನು ನೀಡಲು ನಿರಾಕರಿಸಿದ ಹಿನ್ನಲೆಯಲ್ಲಿ ವಿಷಯವನ್ನು ಮುಂದಿನ ಸಭೆಗೆ ಮಂಡಿಸುವಂತೆ ತಿಳಿಸಿದರು ಮತ್ತು ಹಾಸನ ಜಿಲ್ಲಾ ಪಂಚಾಯತ್ ಕಛೇರಿ ಕಟ್ಟಡಕ್ಕೆ ಕಾವಲುಗಾರನ ಕೊಠಡಿ, ಗ್ರಾನೈಟ್ ಕುರ್ಚಿ ಅಳವಡಿಸುವುದು ಮತ್ತು ತಂತಿ ಬೇಲಿ ರೂ.2.85ಲಕ್ಷಗಳು. ಹಾಸನ ಜಿಲ್ಲಾ ಪಂಚಾಯತ್ ಕಛೇರಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕೊಠಡಿಗೆ ಬಣ್ಣ ಬಳಿಯುವುದು ಮತ್ತು ಕಿಟಕಿಗಳಿಗೆ ವರ್ಟಿಕಲ್ ಬ್ಲೈಂಡ್ | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಮಾನ್ಯ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರುಗಳು ಹೇಮಾವತಿ ಸಭಾಂಗಣದ ನವೀಕರಣದ ಕಾಮಗಾರಿಯ ಉಳಿಕೆ ಅನುದಾನವನ್ನು ನೀಡಲು ವೆಚ್ಚದ ವಿವಿಧ ಬಾಬ್ತುಗಳ ಕೂಲಂಕುಷ ಪರಿಶೀಲನೆಯೊಂದಿಗೆ ಅನುಮೋದಿಸಲು ತೀರ್ಮಾನಿಸಲಾಯಿತು. ಮತ್ತು ಹಾಸನ ಜಿಲ್ಲಾ ಪಂಚಾಯತ್ ಕಛೇರಿ ಕಟ್ಟಡಕ್ಕೆ ಕಾವಲುಗಾರನ ಕೊಠಡಿ, ಗ್ರಾನೈಟ್ ಕುರ್ಚಿ ಅಳವಡಿಸುವುದು ಮತ್ತು ತಂತಿ ಬೇಲಿ ರೂ.2.85 ಲಕ್ಷಗಳು. ಹಾಸನ ಜಿಲ್ಲಾ ಪಂಚಾಯತ್ ಕಛೇರಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕೊಠಡಿಗೆ ಬಣ್ಣ ಬಳಿಯುವುದು ಮತ್ತು ಕಿಟಕಿಗಳಿಗೆ ವರ್ಟಿಕಲ್ ಬ್ಲೈಂಡ್ ಅಳವಡಿಸುವುದು. ರೂ.0.50ಲಕ್ಷಗಳ ಕಾಮಗಾರಿಗಳಿಗೆ ಅನುಮೋದನೆಯನ್ನು ನೀಡಲು ಮತ್ತು ಉಳಿಕೆ ಅನುದಾನಕ್ಕೆ ಹೊಸ ಕಾಮಗಾರಿಗಳ ಕ್ರಿಯಾ |

| | | | |
|---|---|---|---|
| | | 13ನೇ ಹಣಕಾಸು ಆಯೋಗದ ಇತರೆ ರಸ್ತೆ ಅಭಿವೃದ್ಧಿ ಯೋಜನೆಯಡಿ 2012-13ನೇ ಸಾಲಿಗೆ ರೂ.109.23ಲಕ್ಷಗಳು ನಿಗದಿಯಾಗಿದ್ದು, ಅದರಲ್ಲಿ ರೂ.15.00ಲಕ್ಷಗಳ ಅನುದಾನ ಮುಂದುವರೆದ ಕಾಮಗಾರಿಗಳಿಗೆ ಬೇಕಾಗಿರುತ್ತದೆ ಮತ್ತು ರೂ.94.23ಲಕ್ಷಗಳ ಅನುದಾನ ಹೊಸ ಕಾಮಗಾರಿಗಳಿಗೆ ಲಭ್ಯವಾಗುತ್ತದೆ ಎಂದು ಮುಖ್ಯ ಯೋಜನಾಧಿಕಾರಿಯವರು ಸಭೆಗೆ ವಿವರ ನೀಡಿದರು.<br>ಮಾನ್ಯ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರುಗಳು 2012-13ನೇ ಸಾಲಿಗೆ 13ನೇ ಹಣಕಾಸು ಆಯೋಗದ ಇತರೆ ರಸ್ತೆ ಅಭಿವೃದ್ಧಿ ಯೋಜನೆಯಡಿ ನಿಗದಿಯಾಗಿರುವ ರೂ.109.23 ಲಕ್ಷಗಳಲ್ಲಿ ಮುಂದುವರೆದ ಕಾಮಗಾರಿಗಳಿಗೆ ರೂ.15.00ಲಕ್ಷಗಳನ್ನು ವಿನಿಯೋಗಿಸಲು ಮತ್ತು ಹೆಚ್ಚುವರಿಯಾಗಿ ರೂ.5.67ಲಕ್ಷಗಳನ್ನು ಸೇರಿಸಿ ಒಟ್ಟು ರೂ.100.00ಲಕ್ಷಗಳಿಗೆ ಹೊಸ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟರು.<br>2515ರ ಜಿಲ್ಲಾ ಪಂಚಾಯತ್ ಅಧ್ಯಕ್ಷರ ಅಭಿವೃದ್ಧಿ ಅನುದಾನ ಯೋಜನೆಯಡಿ ನಿಗಧಿಯಾಗಿರುವ ರೂ.200.00ಲಕ್ಷಗಳಲ್ಲಿ ರೂ.15.00ಲಕ್ಷಗಳ ಅನುದಾನವನ್ನು ಮುಂದುವರೆದ ಕಾಮಗಾರಿಗಳಿಗೆ ತೆಗೆದಿರಿಸಿ ಉಳಿದ ಅನುದಾನ ಹೊಸ ಕಾಮಗಾರಿಗಳಿಗೆ ಲಭ್ಯವಿರುವುದಾಗಿ ಮುಖ್ಯ ಯೋಜನಾಧಿಕಾರಿಯವರು ಸಭೆಗೆ ವಿವರ ನೀಡಿದರು.<br>ಮಾನ್ಯ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರುಗಳು 2012-13ನೇ ಸಾಲಿಗೆ 2515ರ ಜಿಲ್ಲಾ ಪಂಚಾಯತ್ ಅಧ್ಯಕ್ಷರ ಅಭಿವೃದ್ಧಿ ಅನುದಾನ ಯೋಜನೆಯಡಿ ನಿಗಧಿಯಾಗಿರುವ ರೂ.200.00ಲಕ್ಷಗಳಲ್ಲಿ ಮುಂದುವರೆದ ಕಾಮಗಾರಿಗಳಿಗೆ ಅವಶ್ಯ ಅನುದಾನವನ್ನು ತೆಗೆದಿರಿಸಿ ಉಳಿದ ಅನುದಾನ ಹೊಸ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟರು. | ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.<br>ಸಭೆಯಲ್ಲಿ ಚರ್ಚಿಸಿದಂತೆ, 2012-13ನೇ ಸಾಲಿಗೆ 13ನೇ ಹಣಕಾಸು ಆಯೋಗದ ಇತರೆ ರಸ್ತೆ ಅಭಿವೃದ್ಧಿ ಯೋಜನೆಯಡಿ ನಿಗದಿಯಾಗಿರುವ ರೂ.109.23 ಲಕ್ಷಗಳಲ್ಲಿ ಮುಂದುವರೆದ ಕಾಮಗಾರಿಗಳಿಗೆ ರೂ.15.00ಲಕ್ಷಗಳನ್ನು ವಿನಿಯೋಗಿಸಲು ಮತ್ತು ಹೆಚ್ಚುವರಿಯಾಗಿ ರೂ.5.67ಲಕ್ಷಗಳನ್ನು ಸೇರಿಸಿ ಒಟ್ಟು **ರೂ.100.00ಲಕ್ಷಗಳಿಗೆ ಹೊಸ** ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.<br>2012-13ನೇ ಸಾಲಿಗೆ 3054 ಮುಖ್ಯ ಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಮತ್ತು 13ನೇ ಹಣಕಾಸು ರಸ್ತೆ ಅಭಿವೃದ್ಧಿ ಯೋಜನೆಗಳ ಒಟ್ಟಾರೆ ಲಭ್ಯವಿರುವ ಅನುದಾನದಲ್ಲಿ ಮುಂದುವರೆದ ಕಾಮಗಾರಿಗಳನ್ನು ಹೊರತುಪಡಿಸಿ ಉಳಿಕೆ ಯಾಗುವ ಅನುದಾನಕ್ಕೆ ಎಲ್ಲಾ ಜಿಲ್ಲಾ ಪಂಚಾಯಿತಿ ಕ್ಷೇತ್ರವಾರು ಸಮಾನವಾಗಿ ಕ್ರಿಯಾ ಯೋಜನೆಯನ್ನು ತಯಾರಿಸಲು ತೀರ್ಮಾನಿಸಲಾಯಿತು.<br>ಸಭೆಯಲ್ಲಿ ಚರ್ಚಿಸಿದಂತೆ, 2012-13ನೇ ಸಾಲಿಗೆ 2515ರ ಜಿಲ್ಲಾ ಪಂಚಾಯಿತಿ ಅಧ್ಯಕ್ಷರ ಅಭಿವೃದ್ಧಿ |

<table>
<tr>
<td>2</td>
<td>2012-13ನೇ ಸಾಲಿನಲ್ಲಿ ನಿಗಧಿಯಾದ ಯೋಜನೆಗಳ ಕ್ರಿಯಾ ಯೋಜನೆ ಬಗ್ಗೆ</td>
<td>ಟಿಪ್ಪಣಿ ಸಂಖ್ಯೆ: ಜಿಪಂಹಾ/ಯೋವಿ(3)ಅ.ಅ.ಕ್ರಿ.ಯೋ/13/2012-13 ದಿನಾಂಕ: 30-06-2012ನ್ನು ಸಭೆಯಲ್ಲಿ ಮಂಡಿಸಲಾಯಿತು.<br><br>ಮುಖ್ಯ ಯೋಜನಾಧಿಕಾರಿಯವರು ಮಾತನಾಡುತ್ತಾ, 2012-13ನೇ ಸಾಲಿನಲ್ಲಿ ನಿಗಧಿಯಾದ ವಿವಿಧ ಯೋಜನೆಗಳ ಅನುದಾನಗಳಿಗೆ ಕ್ರಿಯಾ ಯೋಜನೆಗಳನ್ನು ರೂಪಿಸಿ ಅನುಷ್ಠಾನಪಡಿಸಬೇಕಾಗಿದ್ದು, ಈ ಕೆಳಕಂಡ ಯೋಜನೆಗಳಡಿ ನಿಗಧಿಯಾದ ಅನುದಾನಕ್ಕೆ ಮುಂದುವರೆದ ಕಾಮಗಾರಿಗಳನ್ನೊಳಗೊಂಡ ಕ್ರಿಯಾ ಯೋಜನೆಯನ್ನು ತಯಾರಿಸಬೇಕಾಗಿರುತ್ತದೆ.<br><br>1. 3054 CMGSY (ಮುಖ್ಯ ಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ) ರೂ.330.37ಲಕ್ಷಗಳು<br>2. 13ನೇ ಹಣಕಾಸು ಆಯೋಗದ ರಸ್ತೆ ಅಭಿವೃದ್ಧಿ ಯೋಜನೆ ರೂ.383.70ಲಕ್ಷಗಳು<br>3. 13ನೇ ಹಣಕಾಸು ಆಯೋಗದ ಇತರ ರಸ್ತೆ ಅಭಿವೃದ್ಧಿ ಯೋಜನೆ ರೂ.109.23 ಲಕ್ಷಗಳು<br>4. 2515 ಜಿಲ್ಲಾ ಪಂಚಾಯತ್ ಅಧ್ಯಕ್ಷರ ಅಭಿವೃದ್ಧಿ ಅನುದಾನ ಯೋಜನೆ ರೂ.200.00ಲಕ್ಷಗಳು<br><br>ಮುಖ್ಯ ಯೋಜನಾಧಿಕಾರಿಯವರು ಮಾತನಾಡುತ್ತಾ, 3054 ಮುಖ್ಯ ಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಯಡಿ ಮುಂದುವರೆದ ಕಾಮಗಾರಿಗಳಿಗಾಗಿ ರೂ.110.00ಲಕ್ಷಗಳು ಮತ್ತು ಎನ್.ಎಂ.ಆರ್ ದಿನಗೂಲಿ ನೌಕರರುಗಳಿಗೆ ವೇತನಕ್ಕಾಗಿ ಸರ್ಕಾರದ ಆದೇಶದಂತೆ ರೂ.94.00ಲಕ್ಷಗಳು ಒಟ್ಟು ರೂ.204.00ಲಕ್ಷಗಳನ್ನು ಕಳೆದಲ್ಲಿ ರೂ.126.37ಲಕ್ಷಗಳು ಉಳಿಕೆಯಾಗಲಿದೆ ಎಂದು ಸಭೆಗೆ ವಿವರ ನೀಡಿದರು.<br><br>ಮಾನ್ಯ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರುಗಳು 2012-13ನೇ ಸಾಲಿಗೆ ಹೊಸ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ರೂ.200.00ಲಕ್ಷಗಳಿಗೆ ಸಿದ್ಧಪಡಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟರು.<br><br>13ನೇ ಹಣಕಾಸು ಆಯೋಗದ ರಸ್ತೆ ಅಭಿವೃದ್ಧಿ ಯೋಜನೆಗೆ ಸಂಬಂಧಿಸಿದಂತೆ, 2012-13ನೇ ಸಾಲಿಗೆ ರೂ.383.70ಲಕ್ಷಗಳನ್ನು ನಿಗಧಿಪಡಿಸಿದ್ದು, ಮುಂದುವರೆದ ಕಾಮಗಾರಿಗಳಿಗಾಗಿ ರೂ.120.00ಲಕ್ಷಗಳನ್ನು ತೆಗೆದಿರಿಸಿದಲ್ಲಿ ರೂ.263.70ಲಕ್ಷಗಳು ಉಳಿಯಲಿದೆ ಎಂದು ಮುಖ್ಯ ಯೋಜನಾಧಿಕಾರಿಯವರು ಸಭೆಗೆ ವಿವರ ಒದಗಿಸಿದರು.<br><br>ಮಾನ್ಯ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರುಗಳು 2012-13ನೇ ಸಾಲಿಗೆ 13ನೇ ಹಣಕಾಸು ಆಯೋಗದ ರಸ್ತೆ ಅಭಿವೃದ್ಧಿ ಯೋಜನೆಯಡಿ ಮುಂದುವರೆದ ಕಾಮಗಾರಿಗಳಿಗೆ ರೂ.120.00ಲಕ್ಷಗಳನ್ನು ವಿನಿಯೋಗಿಸಲು ಮತ್ತು ಉಳಿಕೆ ಹಣ ರೂ.263.70ಲಕ್ಷಗಳು ಹಾಗೂ ರೂ.33.30ಲಕ್ಷಗಳ ಹೆಚ್ಚುವರಿ ಅನುದಾನ ಸೇರಿ ಒಟ್ಟು ರೂ.300.00ಲಕ್ಷಗಳಿಗೆ ಹೊಸ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ರೂಪಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟರು.</td>
<td>ಸಭೆಯಲ್ಲಿ ವಿವಿಧ ಯೋಜನೆಗಳ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br><br>3054 ಮುಖ್ಯ ಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಯಡಿ 2012-13ನೇ ಸಾಲಿಗೆ ನಿಗಧಿಯಾಗಿರುವ ರೂ.330.37 ಲಕ್ಷಗಳಲ್ಲಿ ಮುಂದುವರೆದ ಕಾಮಗಾರಿಗಳಿಗೆ ರೂ.110.00 ಲಕ್ಷಗಳು ಮತ್ತು ಎನ್.ಎಂ.ಆರ್ ದಿನಗೂಲಿ ನೌಕರರ ವೇತನಕ್ಕೆ ರೂ.94.00 ಲಕ್ಷಗಳು ಒಟ್ಟು ರೂ.204.00ಲಕ್ಷಗಳನ್ನು ನಿಗದಿಪಡಿಸಿದರೆ, ರೂ.126.37ಲಕ್ಷಗಳು ಹೊಸ ಕಾಮಗಾರಿಗಳಿಗೆ ಲಭ್ಯವಾಗುತ್ತದೆ. ರೂ.73.63ಲಕ್ಷಗಳ ಹೆಚ್ಚುವರಿ ಸೇರಿಸಿ ರೂ.200.00ಲಕ್ಷಗಳಿಗೆ ಹೊಸ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.<br><br>13ನೇ ಹಣಕಾಸು ಆಯೋಗದ ರಸ್ತೆ ಅಭಿವೃದ್ಧಿ ಯೋಜನೆಗೆ ಸಂಬಂಧಿಸಿದಂತೆ, 2012-13ನೇ ಸಾಲಿಗೆ ನಿಗದಿಯಾಗಿರುವ ಅನುದಾನ ರೂ.383.70ಲಕ್ಷಗಳಲ್ಲಿ ರೂ.120.00ಲಕ್ಷಗಳನ್ನು ಮುಂದುವರೆದ ಕಾಮಗಾರಿಗಳಿಗಾಗಿ ವಿನಿಯೋಗಿಸಲು ಹಾಗೂ ಉಳಿದ ರೂ.263.070ಲಕ್ಷಗಳು ಹಾಗೂ ಹೆಚ್ಚುವರಿ ರೂ.33.30ಲಕ್ಷಗಳು ಸೇರಿ ಒಟ್ಟು ರೂ.300.00ಲಕ್ಷಗಳಿಗೆ ಹೊಸ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲು</td>
</tr>
</table>

ದಿನಾಂಕ: 04-07-2012ರಂದು ಬೆಳಿಗ್ಗೆ:11-00ಗಂಟೆಗೆ ಹೇಮಾವತಿ ಸಭಾಂಗಣ, ಜಿಲ್ಲಾ ಪಂಚಾಯಿತಿ, ಹಾಸನ ಇಲ್ಲಿ ನಡೆದ ಸಾಮಾನ್ಯ ಸ್ಥಾಯಿ ಸಮಿತಿ ಸಭೆಯ ನಡವಳಿಗಳು

ಅಧ್ಯಕ್ಷತೆ: ಶ್ರೀಮತಿ ಸುಲೋಚನಾ ರಾಮಕೃಷ್ಣ,
ಅಧ್ಯಕ್ಷರು, ಸಾಮಾನ್ಯ ಸ್ಥಾಯಿ ಸಮಿತಿ.

ಹಾಜರಿ:06

ಗೈರು ಹಾಜರಿ:01

| ಕ್ರಸಂ | ವಿಷಯ | ಚರ್ಚೆ | ತೀರ್ಮಾನ |
|---|---|---|---|
| | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಸಭೆಗೆ ಹಾಜರಿದ್ದ ಮಾನ್ಯ ಸಮಿತಿ ಅಧ್ಯಕ್ಷರು, ಸದಸ್ಯರು, ಮುಖ್ಯ ಲೆಕ್ಕಾಧಿಕಾರಿ, ಮುಖ್ಯ ಯೋಜನಾಧಿಕಾರಿ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಯವರನ್ನು ಸ್ವಾಗತಿಸುತ್ತಾ, ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಬೇಕೆಂದು ಮಾನ್ಯ ಸಮಿತಿ ಅಧ್ಯಕ್ಷರನ್ನು ಕೋರಿದರು. | | |
| 1 | 2012-13ನೇ ಸಾಲಿನ ಆರ್ಥಿಕ ವರ್ಷಕ್ಕಾಗಿ ಯೋಜನೇತರ ಹುದ್ದೆಗಳನ್ನು ಮುಂದುವರೆಸುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಆ(8)ತಾ.ಹು.ಮಂ 24/2011-12 ದಿನಾಂಕ: 17-05-2011ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಸನ ಇಲ್ಲಿನ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೆ ಆಡಳಿತ ಲೆಕ್ಕಶೀರ್ಷಿಕೆ 2235-00-101-0-27 (ಯೋಜನೇತರ) ಶೀರ್ಷಿಕೆಯಡಿ 10 ಹುದ್ದೆಗಳನ್ನು ಮುಂದುವರಿಕೆಗಾಗಿ 2012-13ನೇ ಸಾಲಿಗೆ ಆಡಳಿತಾತ್ಮಕ ಮಂಜೂರಾತಿ ಅವಶ್ಯಕವಾಗಿರುವುದರಿಂದ, ಮುಂದುವರಿಕೆಯ ಆದೇಶ ನೀಡುವಂತೆ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಸನ ಇವರು ಕೋರಿರುತ್ತಾರೆ.<br>ಮಾನ್ಯ ಸದಸ್ಯರಾದ ಶ್ರೀ ರಾಮಚಂದ್ರ( ಬೈರಮುಡಿ ರಾಮಚಂದ್ರ) ರವರು ಮಾತನಾಡುತ್ತಾ, ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಇಲಾಖೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರಗಳನ್ನು ನೀಡಬೇಕೆಂದು ಕೋರಿದರು ಮತ್ತು ಕೆಲವು ಇಲಾಖೆಗಳಲ್ಲಿ ಗ್ರೂಪ್-ಡಿ ಸಿಬ್ಬಂದಿಯವರ ಕೊರತೆಯಿರುವುದು ಕಂಡುಬಂದಿರುತ್ತದೆ. ಗ್ರೂಪ್-ಡಿ ಸಿಬ್ಬಂದಿಯವರನ್ನು ನೇಮಕ ಮಾಡುವ ಬಗ್ಗೆ ಕ್ರಮ ವಹಿಸಬೇಕೆಂದು ಕೋರಿದರು.<br>ಮಾನ್ಯ ಸದಸ್ಯರಾದ ಶ್ರೀ ದೇವೇಗೌಡ (ಪಾಪಣ್ಣಿ) ರವರು ಮಾತನಾಡುತ್ತಾ, ಸಿಬ್ಬಂದಿಗಳು ಅವಶ್ಯಕತೆಗಿಂತ ಹೆಚ್ಚಿರುವ ಇಲಾಖೆಗಳಿಂದ ಸಿಬ್ಬಂದಿ ಕೊರತೆಯಿರುವ ಇಲಾಖೆಗಳಿಗೆ ನಿಯೋಜನೆ ಮಾಡಲು ಕ್ರಮ ವಹಿಸಬೇಕೆಂದು ಕೋರಿದರು.<br>ಮುಖ್ಯ ಯೋಜನಾಧಿಕಾರಿಯವರು ಮಾತನಾಡುತ್ತಾ, ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಇಲಾಖೆಗಳಲ್ಲಿರುವ ಸಿಬ್ಬಂದಿವರ್ಗದವರ ಪೂರ್ಣ ವಿವರಗಳನ್ನು ಮುಂದಿನ ಸಭೆಗೆ ನೀಡಲು ಕ್ರಮ ವಹಿಸುವುದಾಗಿ ಸಭೆಗೆ ವಿವರ ನೀಡಿದರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಸನ ಇವರು ಕೋರಿರುವಂತೆ ಆಡಳಿತ ಲೆಕ್ಕಶೀರ್ಷಿಕೆ 2235-00-101-0-27 (ಯೋಜನೇತರ) ಶೀರ್ಷಿಕೆಯಡಿ 10 ಹುದ್ದೆಗಳನ್ನು ಮುಂದುವರಿಕೆಗಾಗಿ 2012-13ನೇ ಸಾಲಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |

6. ಶ್ರೀ ಬಿ.ಎನ್.ರಾಮಚಂದ್ರ (ಭೈರಮುಡಿ ರಾಮಚಂದ್ರು), ಸದಸ್ಯರು, ಸಾಮಾನ್ಯ ಸ್ಥಾಯಿ ಸಮಿತಿ
7. ಶ್ರೀಮತಿ ಹೆಚ್.ಎನ್.ಗೌರಮ್ಮ, ಸದಸ್ಯರು, ಸಾಮಾನ್ಯ ಸ್ಥಾಯಿ ಸಮಿತಿ
8. ಮಾನ್ಯ ಅಧ್ಯಕ್ಷರು/ಮಾನ್ಯ ಉಪಾಧ್ಯಕ್ಷರು ಜಿಲ್ಲಾ ಪಂಚಾಯಿತಿ, ಹಾಸನ ಇವರ ಆಪ್ತ ಶಾಖೆಗೆ ಮಾಹಿತಿಗಾಗಿ
9. ಜಿಲ್ಲಾ ಪಂಚಾಯಿತಿ ಎಲ್ಲಾ ಮಾನ್ಯ ಸದಸ್ಯರುಗಳಿಗೆ ಮಾಹಿತಿಗಾಗಿ
10. ಮಾನ್ಯ ಮುಖ್ಯ ಕಾರ್ಯನಿವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಹಾಸನ ಇವರ ಆಪ್ತ ಶಾಖೆಗೆ
11. ಉಪ ಕಾರ್ಯದರ್ಶಿ(ಆಡಳಿತ), ಜಿಲ್ಲಾ ಪಂಚಾಯಿತಿ, ಹಾಸನ.
12. ಉಪ ಕಾರ್ಯದರ್ಶಿ(ಅಭಿವೃದ್ಧಿ), ಜಿಲ್ಲಾ ಪಂಚಾಯಿತಿ, ಹಾಸನ.
13. ಮುಖ್ಯ ಲೆಕ್ಕಾಧಿಕಾರಿ, ಜಿಲ್ಲಾ ಪಂಚಾಯಿತಿ, ಹಾಸನ.
14. ಮುಖ್ಯ ಯೋಜನಾಧಿಕಾರಿ, ಜಿಲ್ಲಾ ಪಂಚಾಯಿತಿ, ಹಾಸನ.
15. ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ/ ಚನ್ನರಾಯಪಟ್ಟಣ
16. ಜಿಲ್ಲೆಯ ಎಲ್ಲಾ ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಹಾಸನ ಮತ್ತು ಚನ್ನರಾಯಪಟ್ಟಣ
17. ಜಿಲ್ಲೆಯ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ
18. ಉಪ ನಿರ್ದೇಶಕರು, ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯಗಳ ಇಲಾಖೆ, ಹಾಸನ.
19. ಕಛೇರಿ ಪ್ರತಿ.

# ಜಿಲ್ಲಾ ಪಂಚಾಯಿತಿ, ಹಾಸನ.

ಸಂಖ್ಯೆ: ಜಿ.ಪಂಹಾ/ಪ.ಶಾ/13/2012-13

ದಿನಾಂಕ: 25-06-2012

## ಸಭಾಹ್ವಾನ ಪತ್ರ

ಶ್ರೀಮತಿ ಸುಲೋಚನಾ ರಾಮಕೃಷ್ಣ, ಅಧ್ಯಕ್ಷರು, ಸಾಮಾನ್ಯ ಸ್ಥಾಯಿ ಸಮಿತಿ, ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 04-07-2012ರಂದು ಬುಧವಾರ ಬೆಳಿಗ್ಗೆ: 11-00ಗಂಟೆಗೆ ಹೊಯ್ಸಳ ಸಭಾಂಗಣ, ಜಿಲ್ಲಾ ಪಂಚಾಯಿತಿ, ಹಾಸನ ಇಲ್ಲಿ ಸಾಮಾನ್ಯ ಸ್ಥಾಯಿ ಸಮಿತಿ ಸಭೆಯನ್ನು ಕರೆಯಲಾಗಿದೆ. ಸದರಿ ಸಭೆಗೆ ಸದಸ್ಯರುಗಳು ಸಕಾಲಕ್ಕೆ ಹಾಜರಾಗಬೇಕೆಂದು ಕೋರಿದೆ.

(ಎಸ್.ಟಿ.ಅಂಜನ್‌ಕುಮಾರ್),
ಸದಸ್ಯ ಕಾರ್ಯದರ್ಶಿ ಹಾಗೂ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯಿತಿ, ಹಾಸನ.

**ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳು:**

1. 2012-13ನೇ ಸಾಲಿನ ಆರ್ಥಿಕ ವರ್ಷಕ್ಕಾಗಿ ಯೋಜನೇತರ ಹುದ್ದೆಗಳನ್ನು ಮುಂದುವರೆಸುವ ಬಗ್ಗೆ.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು**

ಪ್ರತಿಯನ್ನು:

1. ಶ್ರೀಮತಿ ಸುಲೋಚನಾ ರಾಮಕೃಷ್ಣ, ಅಧ್ಯಕ್ಷರು, ಸಾಮಾನ್ಯ ಸ್ಥಾಯಿ ಸಮಿತಿ
2. ಶ್ರೀಮತಿ ಜಿ.ಟಿ. ಇಂದಿರಾಧರ್ಮಪ್ಪ, ಸದಸ್ಯರು, ಸಾಮಾನ್ಯ ಸ್ಥಾಯಿ ಸಮಿತಿ
3. ಶ್ರೀಮತಿ ಕುಸುಮ ಬಾಲಕೃಷ್ಣ, ಸದಸ್ಯರು, ಸಾಮಾನ್ಯ ನ್ಯಾಯ ಸ್ಥಾಯಿ ಸಮಿತಿ
4. ಶ್ರೀ ದೇವೇಗೌಡ ಉರುಫ್ ಪಾಪಣ್ಣಿ, ಸದಸ್ಯರು, ಸಾಮಾನ್ಯ ಸ್ಥಾಯಿ ಸಮಿತಿ
5. ಶ್ರೀ ಬಿಳಿಚೌಡಯ್ಯ, ಸದಸ್ಯರು, ಸಾಮಾನ್ಯ ಸ್ಥಾಯಿ ಸಮಿತಿ